ಒ ಎಸ್ ನಂ. 24/2016

ಪಿಡಬ್ಲ್ಯೂ: 1

ದಿನಾಂಕಃ 28-07-2025

ಮಧ್ಯಂತರ ಅರ್ಜಿಯ ಮೇಲಿನ ಆದೇಶದ ಮೇರೆಗೆ ಈ ದಿನದಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಪಿ ಆರ್ ಪಿ 6 ನೇ ಪ್ರತಿವಾದಿಯ ಪರ ವಕೀಲರಿಂದ**

ಬಸಪ್ಪನ ವಾರಸುದಾರರು ಯಾರು ಎಂದು ರುಜುವಾತು ಪಡಿಸಲು ಆತನ ವಾರಸಾ ಪ್ರಮಾಣ ಪತ್ರ ಹಾಜರು ಪಡಿಸಿದ್ದೇನೆ. ಸದರಿ ವಾರಸಾ ಪ್ರಮಾಣ ಪತ್ರದಲ್ಲಿ ಬಸಪ್ಪನ ವಾರಸುದಾರರು ಎಂದು ಯಾರ ಹೆಸರನ್ನು ನಮೂದಿಸಲಾಗಿದೆ ಎಂಬುದು ಗೊತ್ತಿಲ್ಲ. ಬಸಪ್ಪ ಮೃತಪಟ್ಟ ನಂತರ ಆತನ ಆಸ್ತಿಗಳಿಗೆ ತಾನು ಸಹ ವಾರಸುದಾರಳು ಎಂದು ತನ್ನ ಹೆಸರು ದಾಖಲಿಸುವಂತೆ ಮಹಾಂತವ್ವ ಅರ್ಜಿ ಸಲ್ಲಿಸಿದ್ದಳು. ಸದರಿ ಅರ್ಜಿಯ ಪ್ರಕಾರ ಮಹಾಂತವ್ವರವರ ಹೆಸರು ಬಸಪ್ಪನ ಆಸ್ತಿಗಳಿಗೆ ದಾಖಲು ಆಗಿತ್ತು. ಮಹಾಂತವ್ವನ ಹೆಸರು ದಾಖಲಾದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ಸದರಿ ಮಹಾಂತವ್ವ ಯಾವ ವರ್ಷದಲ್ಲಿ ಮೃತಪಟ್ಟಿದ್ದಾಳೆ ಎಂಬುದು ಗೊತ್ತಿಲ್ಲ. ಸದರಿ ಮಹಾಂತವ್ವ ಮೃತಪಟ್ಟ ನಂತರ ಅವರ ಹೆಸರು ದಾಖಲಾಗಿದ್ದವು ಹೇಳುವ ಆಸ್ತಿಗಳಿಗೆ ವಾರಸಾ ಪ್ರಕಾರ ನಮ್ಮ ಹೆಸರು ದಾಖಲಿಸುವಂತೆ ಅರ್ಜಿ ಸಲ್ಲಿಸಿದ್ದೇವು. ಆ ಪ್ರಕಾರ ಮಹಾಂತವ್ವನ ವಾರಸುದಾರರ ಹೆಸರುಗಳು ಆಸ್ತಿಗೆ ದಾಖಲಾಗಿರುತ್ತವೆ. ಮಹಾಂತವ್ವನ ವಾರಸುದಾರರ ಹೆಸರು ದಾಖಲಾದ ಬಗ್ಗೆ ಪಹಣಿಗಳನ್ನು ಹಾಜರು ಪಡಿಸಿದ್ದೇನೆ.

ದಾವೆ ಸಲ್ಲಿಸುವ ಸಮಯದಲ್ಲಿ ದಾವಾ ಆಸ್ತಿಯ ಪಹಣಿಯಲ್ಲಿ ಯಾರ ಹೆಸರುಗಳು ದಾಖಲಾಗಿದ್ದವು ಎಂಬುದು ಗೊತ್ತಿಲ್ಲ. ಮಹಾಂತವ್ವ ಬಸಪ್ಪನ ವಾರಸುದಾರಳು ಆಗಿಲ್ಲದೆ ಇರುವ ಕಾರಣ ಬಸಪ್ಪನ ಆಸ್ತಿಗಳಿಗೆ ತನ್ನ ಹೆಸರನ್ನು ದಾಖಲಿಸಲು ಪ್ರಯತ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ಬಸಪ್ಪನ ಆಸ್ತಿಗಳಿಗೆ ಮಹಾಂತವ್ವನ ಹೆಸರು ದಾಖಲಾಗದೆ ಇರುವ ಕಾರಣ ಅವಳು ಮೃತಪಟ್ಟ ನಂತರ ಅವಳ ವಾರಸುದಾರರ ಹೆಸರೂ ಸಹ ಬಸಪ್ಪನ ಆಸ್ತಿಗಳಿಗೆ ದಾಖಲಾಗಿರುವುದಿಲ್ಲ ಎಂದರೆ ಸರಿಯಲ್ಲ. ಚಂದ್ರಶೇಖರವರು ಮಹಾಂತವ್ವನ ಗಂಡ ಎಂದು ರುಜುವಾತು ಪಡಿಸಲು ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ಮಹಾಂತವ್ವನ ಮರಣ ಪ್ರಮಾಣ ಪತ್ರ ಹಾಜರು ಪಡಿಸಿದ್ದೇನೆ. ಮಹಾಂತವ್ವನ ವಾರಸುದಾರರು ಯಾರು ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿದ್ದೇನೆ.

ಮಹಾಂತವ್ವ ಬಸಪ್ಪ ಚಿಕ್ಕೊಪ್ಪರವರು ನನ್ನ ತಾಯಿ. ಸದರಿ ಮಹಾಂತವ್ವ ಬಸಪ್ಪ ಚಿಕ್ಕೊಪ್ಪರವರನ್ನು

ಯಾವ ಗ್ರಾಮದ ಯಾವ ವ್ಯಕ್ತಿಯೊಂದಿಗೆ ಮದುವೆ ಮಾಡಿಕೊಡಲಾಗಿತ್ತು ಎಂಬ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ಸದರಿ ಮಹಾಂತವ್ವ ಬಸಪ್ಪ ಚಿಕ್ಕೊಪ್ಪರವರಿಗೂ ಚಂದ್ರಶೇಖರ ಶಿರೋಳರವರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ನಿಪಿಃ 1 ಮತ್ತು 2 ದಾಖಲೆಗಳನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಸರ್ವೆ ನಂಬರ ಹೇಳಲು ಆಗುವುದಿಲ್ಲ. ಸದರಿ ಆಸ್ತಿಯು ಮೂಲತಃ ಅಜ್ಜಿ ಮಲ್ಲಮ್ಮರವರ ಹೆಸರಿನಲ್ಲಿ ಇತ್ತು. ವ್ಯಾಪಾರದಿಂದ ಚಂದ್ರಶೇಖರವರು ಗಳಿಸಿದ ಹಣವನ್ನು ಮಲ್ಲವ್ವರವರು ತೆಗೆದುಕೊಂಡು ಬಂದು ದಾವಾ ಆಸ್ತಿಯನ್ನು ಖರೀದಿಸಿದ್ದಾರೆ. ಆ ಪ್ರಕಾರ ದಾವಾ ಆಸ್ತಿಯು ಮಲ್ಲವ್ವ ಖರೀದಿ ಹಿಡಿದ ಆಸ್ತಿ ಎಂದರೆ ಸರಿ. ಆ ಕುರಿತು ಖರೀದಿ ಪತ್ರ ಹಾಜರು ಪಡಿಸಿರುತ್ತೇನೆ. ಸದರಿ ಮಲ್ಲವ್ವ ತನ್ನ ಜೀವಿತಾವಧಿಯಲ್ಲಿ ದಾವಾಆಸ್ತಿಯನ್ನು ತನ್ನ ಮೊಮ್ಮಗನಾದ ಮಂಜುನಾಥನಿಗೆ ನೀಡಿದ್ದಳು ಎಂದರೆ ಸರಿಯಲ್ಲ. ದಾವಾ ಆಸ್ತಿ ಮೂಲತಃ ಬಸಪ್ಪನಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಚಂದ್ರಶೇಖರ ಮತ್ತು ಮಂಜುನಾಥರವರ ಹೆಸರುಗಳು ದಾಖಲಾಗಿದ್ದವು ಎಂದರೆ ಸರಿಯಲ್ಲ. ಮಂಜುನಾಥ ವಿವಾಹ ಆಗದೆ ಮೃತಪಟ್ಟಿದ್ದಾನೆ ಎಂದರೆ ಸರಿ. ಮಂಜುನಾಥ ಮೃತಪಟ್ಟ ನಂತರ ಆತನ ಹೆಸರಿನಲ್ಲಿದ್ದ ಆಸ್ತಿಗೆ ಆತನ ತಂದೆ ವಿರುಪಾಕ್ಷಪ್ಪ ಮತ್ತು ತಾಯಿ ಅನಸವ್ವರವರ ಹೆಸರು ದಾಖಲಾಗಿರುತ್ತವೆ ಎಂದರೆ ಸರಿಯಲ್ಲ. ಚಂದ್ರಶೇಖರ ಸಹ ಮದುವೆ ಆಗದೆ ಮೃತಪಟ್ಟಿದ್ದಾನೆ ಎಂದರೆ ಸರಿ. ಚಂದ್ರಶೇಖರ ಮತ್ತು ಮಂಜುನಾಥರವರಿಗೆ ಯಾರೂ ವಾರಸುದಾರರು ಇಲ್ಲದ ಕಾರಣ ವಿರುಪಾಕ್ಷಪ್ಪ ಮತ್ತು ಅನಸವ್ವರವರ ಹೆಸರುಗಳು ದಾವಾ ಆಸ್ತಿಗೆ ದಾಖಲಾಗಿವೆ ಎಂದರೆ ಸರಿ.

ದಾವಾ ಆಸ್ತಿಯು ಮೂಲತಃ 8–ಎಕರೆ 17–ಗುಂಟೆ ಜಮೀನು ಇತ್ತು ಎಂದರೆ ಸರಿ. ಆ ಪೈಕಿ 1–ಎಕರೆ ಜಮೀನನ್ನು ವಿರುಪಾಕ್ಷಪ್ಪ ಮತ್ತು ಅನಸವ್ವರವರು ಶಾರದಾ ಶಾಲೆಗೆ ನೀಡಿದ್ದಾರೆ ಎಂದರೆ ಸರಿ. ಆ ಪ್ರಕಾರ ಸದರಿ ಶಾಲೆಯವರು 1–ಎಕರೆ ಜಮೀನನ್ನು ಉಪಯೋಗ ಮಾಡುತ್ತಿದ್ದಾರೆ ಎಂದರೆ ಸರಿ. ಉಳಿದ ಜಮೀನಿನ ಪೈಕಿ 3–ಎಕರೆ 17–ಗುಂಟೆ ಜಮೀನುಗಳನ್ನು ಬೇರೆಬೇರೆ ಸಂದರ್ಭಗಳಲ್ಲಿ ಖರೀದಿ ಪತ್ರಗಳ ಮೂಲಕ ಅಯ್ಯಪ್ಪ ಗುರಪ್ಪ ದಂಡಿನರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಶಾಲೆಗೆ ನೀಡಿದ ಮತ್ತು ದಂಡಿನರವರಿಗೆ ಮಾರಾಟ ಮಾಡಿದ ಬಗ್ಗೆ ನಾನು ಯಾವುದೇ ತಕರಾರು ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಜೀವನೋಪಾಯಕ್ಕೆ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಆ ರೀತಿ ಶಾಲೆಗೆ ಮತ್ತು ದಂಡಿನರವರಿಗೆ ಮಾರಾಟ ಮಾಡಲು ವಿರುಪಾಕ್ಷಪ್ಪ ಮತ್ತು ಅನಸವ್ವರವರಿಗೆ ಮಾಲೀಕತ್ವದ ಹಕ್ಕು ಇತ್ತು ಎಂದರೆ ಸರಿ.

ಉಳಿದ 4–ಎಕರೆ ಜಮೀನು ಎಂದರೆ ದಾವಾ ಆಸ್ತಿಯನ್ನು ಅನಸವ್ವರವರು ತನ್ನ ಸಹೋದರಿಯ ಮಗನಾದ 5 ನೇ ಪ್ರತಿವಾದಿಗೆ ದಾನಪತ್ರದ ಮೂಲಕ ನೀಡಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾನವನ್ನು ಸ್ವೀಕರಿಸಿದ ಪ್ರಕಾರ ದಾವಾ ಆಸ್ತಿಯು 5 ನೇ ಪ್ರತಿವಾದಿಯ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ, ನಮ್ಮ ಸ್ವಾಧೀನದಲ್ಲಿದೆ. ದಾವಾ ಆಸ್ತಿ ನಮ್ಮ ಸ್ವಾಧೀನದಲ್ಲಿ ಇರುವ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ಸಾಕ್ಷಿಯು ಮುಂದುವರೆದು ನಮ್ಮ ಸ್ವಾಧೀನದ ಕುರಿತು ಪಹಣಿ ಪತ್ರಿಕೆ ನೀಡಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಕಂದಾಯ ಪಾವತಿ ಮಾಡಿದ್ದೇನೆ , ಆ ಬಗ್ಗೆ ಕಂದಾಯ ರಶೀದಿಗಳು ಇವೆ ಅವುಗಳನ್ನು ಹಾಜರು ಪಡಿಸಿದ್ದೇನೆ. 5 ನೇ ಪ್ರತಿವಾದಿಯು ತನ್ನ ಮಾಲೀಕತ್ವದ ದಾವಾ ಆಸ್ತಿಯನ್ನು ಆರ್ಥಿಕ ತೊಂದರೆಗಳಿಗಾಗಿ 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾನೆ ಎಂದರೆ ಸಾಕ್ಷಿಯು ಯಾರನ್ನೂ ಕೇಳದೆ ದಾವೆ ದಾಖಲಿಸಿದ ನಂತರ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರದ ಪ್ರಕಾರ 6 ನೇ ಪ್ರತಿವಾದಿಯ ಹೆಸರು ದಾವಾ ಆಸ್ತಿಯ ದಾಖಲೆಗಳಿಗೆ ದಾಖಲಿಸಬಾರದು ಎಂದು ನಾನು ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿ. ಆ ಬಗ್ಗೆ ತಹಶೀಲ್ದಾರ ನ್ಯಾಯಾಲಯದಲ್ಲಿ ವಿಚಾರಣೆ ಆಗಿರುತ್ತದೆ ಎಂದರೆ ಸರಿ. ನಂತರ ದಾವಾ ಆಸ್ತಿಗೆ ಖರೀದಿ ಪತ್ರದ ಪ್ರಕಾರ 6 ನೇ ಪ್ರತಿವಾದಿಯ ಹೆಸರು ದಾಖಲಿಸುವಂತೆ ತಹಶೀಲ್ದಾರ ನ್ಯಾಯಾಲಯದಲ್ಲಿ ಆದೇಶವಾಗಿದೆ ಎಂದರೆ ಸಾಕ್ಷಿಯು ಮೋಸದಿಂದ ಮಾಡಿಸಿಕೊಂಡಿದ್ದಾನೆ ಎಂದು ನುಡಿಯುತ್ತಾರೆ. ಸದರಿ ತಹಶೀಲ್ದಾರ ನ್ಯಾಯಾಲಯದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದೇನೆ. ಸದರಿ ಮೇಲ್ಮನವಿಯ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ.

5 ನೇ ಪ್ರತಿವಾದಿಯು ದಾವಾ ಆಸ್ತಿಯ ಕುರಿತು ಇದೇ ನ್ಯಾಯಾಲಯದಲ್ಲಿ ನನ್ನ ಮತ್ತು ಇತರರ ವಿರುದ್ಧ ದಾವೆ ಸಲ್ಲಿಸಿದ್ದನು ಎಂದರೆ ಸರಿ. ಸದರಿ ದಾವೆಯಲ್ಲಿ ಈ ದಾವೆಯ ಆಸ್ತಿಯ ಆತನ ಸ್ವಾಧೀನಕ್ಕೆ ತಕರಾರು ಮಾಡಬಾರದು ಎಂದು ನಮ್ಮ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಕೋರಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ತಕರಾರು ಸಲ್ಲಿಸಿದ್ದೇನು ಎಂದರೆ ಸರಿ. ಸದರಿ ದಾವೆಯು ವಿಚಾರಣೆ ಆಗಿ 5 ನೇ ಪ್ರತಿವಾದಿಯ ಇದೇ ದಾವೆಯ ಆಸ್ತಿಯ ಸ್ವಾಧೀನಕ್ಕೆ ತಕರಾರು ಮಾಡಬಾರದು ಎಂದು ನನ್ನ ಮತ್ತು ಇತರರ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಆಗಿರುತ್ತದೆ ಎಂದರೆ ಸರಿ. ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದೇನೆ. ಸದರಿ ಮೇಲ್ಮನವಿಯ ಕುರಿತು ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ಸದರಿ ಆದೇಶದ ವಿರುದ್ಧ ನಾನು ಇದುವರೆಗೆ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

5 ನೇ ಪ್ರತಿವಾದಿ ತನ್ನ ಮಾಲೀಕತ್ವದ ದಾವಾ ಆಸ್ತಿಯನ್ನು ಮಾರುಕಟ್ಟೆ ಬೆಲೆಗೆ ಅನುಗುಣವಾಗಿ ರೂ.13 ಲಕ್ಷಗಳಿಗೆ 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾನೆ ಎಂದರೆ ಸಾಕ್ಷಿಯು ಮೋಸದಿಂದ

ಮಾರಾಟ ಮಾಡಿದ್ದಾನೆ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರದ ಪ್ರಕಾರ 6 ನೇ ಪ್ರತಿವಾದಿಯೇ ದಾವಾ ಆಸ್ತಿಯನ್ನು ಸ್ವಾಧೀನ ಹೊಂದಿದ್ದಾನೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಮಾರಾಟಕ್ಕೆ ತೆಗೆದಿದ್ದಾನೆ ಎಂಬ ವಿಷಯ ಗೊತ್ತಾದ ಕೂಡಲೇ ಅಕ್ಕಪಕ್ಕದ ಆಸ್ತಿಗಳ ಮಾಲೀಕರನ್ನು ವಿಚಾರಣೆ ಮಾಡಿ, ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲನೆ ಮಾಡಿ 5 ನೇ ಪ್ರತಿವಾದಿಯೇ ದಾವಾ ಆಸ್ತಿಯ ಮಾಲೀಕನೆಂದು ಕಂಡು ಬಂದ ನಂತರ 6 ನೇ ಪ್ರತಿವಾದಿಯು ಸದರಿ ಆಸ್ತಿಯನ್ನು ಖರೀದಿಸಿದ್ದಾನೆ ಎಂದರೆ ಸರಿಯಲ್ಲ. ಮೂಲತಃ 8–ಎಕರೆ 17–ಗುಂಟೆ ಇದ್ದಾಗಿನಿಂದ ಈಗಿನವರೆಗೂ ಸದರಿ ಆಸ್ತಿಯ ಯಾವುದೇ ದಾಖಲೆಗಳಿಗೆ ನನ್ನ ತಾಯಿ ಮಹಂತವ್ವರನ ಹೆಸರಾಗಲಿ ಹಾಗೂ ನನ್ನ, 1 ರಿಂದ 4 ನೇ ಪ್ರತಿವಾದಿಯರ ಹೆಸರಾಗಲೀ ಎಂದಿಗೂ ಸಹ ದಾಖಲಾಗಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯು ವಿಚಾರಣೆಗೆ ಇದ್ದು ಕಾರಣ ಈ ದಾವೆ ತೀರ್ಮಾನ ಆಗುವವರೆಗೆ ದಾವಾ ಆಸ್ತಿಯ ಕುರಿತು ಯಾವುದೇ ದಾಖಲೆಗಳನ್ನು ನೋಂದಣಿ ಮಾಡಬಾರದು ಎಂದು ಸಂಬಂಧಪಟ್ಟ ನೋಂದಣಿ ಅಧಿಕಾರಿಗೆ ಅರ್ಜಿ ಸಲ್ಲಿಸಿದ್ದೇನು. ಆ ಕುರಿತು ಸೂಕ್ತ ಆದೇಶದೊಂದಿಗೆ ಸದರಿ ಕಚೇರಿಯವರು ನನಗೆ ವರದಿ ನೀಡಿದ್ದಾರೆ. ಸದರಿ ವರದಿಯನ್ನು ಹಾಜರು ಪಡಿಸಿದ್ದೇನೆ. ದಾವೆ ವಿಚಾರಣೆಗೆ ಇರುವ ಕಾರಣ ದಾವಾ ಆಸ್ತಿಯ ಕುರಿತು ಯಾವುದೇ ವ್ಯವಹಾರಗಳನ್ನು ಮಾಡಬಾರದು ಎಂದು ದಿನ ಪತ್ರಿಕೆಯಲ್ಲಿ ಸಾರ್ವಜನಿಕ ನೋಟಿಸ ನೀಡಿರುತ್ತೇನೆ. ಆ ಕುರಿತು ದಿನ ಪತ್ರಿಕೆ ಹಾಜರು ಪಡಿಸಿದ್ದೇನೆ. ದಾವೆ ಚಾಲ್ತಿ ಇದ್ದು ಕಾರಣ ದಾವಾ ಆಸ್ತಿಯ ಕುರಿತು ಯಾವುದೇ ವ್ಯವಹಾರ ಮಾಡದಂತೆ ದಾವಾ ಆಸ್ತಿಯ ಹತ್ತಿರ ಫಲಕ ಅಳವಡಿಸಿದ್ದೀರಾ ಎಂದು ಕೇಳಲು ಸಾಕ್ಷಿಯು ಆ ರೀತಿ ಯಾವುದೇ ಫಲಕ ಅಳವಡಿಸಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಖರೀದಿಸಲು ಯಾರಿಂದಲೂ ಯಾವುದೇ ತಕರಾರು ಇಲ್ಲ ಎಂದು ಖಚಿತಪಡಿಸಿಕೊಂಡು 6 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಖರೀದಿಸಿದ್ದಾನೆ ಎಂದರೆ ಸರಿಯಲ್ಲ.

ದಂಡಾಪೂರದ ಆಸ್ತಿಗಳು ಪ್ರತಿ ಎಕರೆಗೆ ರೂ.2 ಕೋಟಿವರೆಗೆ ಮಾರಾಟವಾಗುತ್ತಿವೆ. ದಾವೆಯಲ್ಲಿ ದಾವಾ ಆಸ್ತಿಯ ಮಾರುಕಟ್ಟೆ ಬೆಲೆಯನ್ನು ಎಷ್ಟು ನಮೂದಿಸಿದ್ದೇನೆ ಎಂಬುದು ಗೊತ್ತಿಲ್ಲ. ದಾವಾ ಆಸ್ತಿಯ ಕುರಿತು ಸರಕಾರದಿಂದ ನಿಗದಿಯಾದ ಮಾರುಕಟ್ಟೆಯ ಬೆಲೆಯ ಕುರಿತು ದಾಖಲೆ ಹಾಜರು ಪಡಿಸಿದ್ದೇನೆ. ಈ ನ್ಯಾಯಾಲಯದಲ್ಲಿ ಈ ದಾವೆ ಸಲ್ಲಿಸಲು ನನಗೆ ಯಾವುದೇ ಹಕ್ಕು ಅಥವಾ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನನಗಾಗಲೀ ಅಥವಾ 1 ರಿಂದ 4 ನೇ ಪ್ರತಿವಾದಿಯರಿಗಾಗಲೀ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ನಾನಾಗಲೀ ಅಥವಾ 1 ರಿಂದ 4 ನೇ ಪ್ರತಿವಾದಿಯರಾಗಲೀ ಎಂದೂ ಸಹ ದಾವಾ ಆಸ್ತಿಯ ಕಬ್ಜಾವಹಿವಾಟು ಹೊಂದಿರುವುದಿಲ್ಲ ಎಂದರೆ

ಸರಿಯಲ್ಲ. ಬಸಪ್ಪ ಪೂಜಾರ, ಯಲ್ಲಪ್ಪ ಪೂಜಾರ, ಶಂಕ್ರಪ್ಪ ಚೆನ್ನಪ್ಪ ಲಕ್ಕಸಕೊಪ್ಪರವರ ಚಿತಾವನೆ ಮೇರೆಗೆ 5 ಮತ್ತು 6 ನೇ ಪ್ರತಿವಾದಿಯರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ  ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರ ದ ನ್ಯಾಯಾಧೀಶರು,  ನರಗುಂದ